
ಎಳೆದು ಹಸುವಿನ ಗೂಟಕ್ಕೇ ಕಟ್ಟಿ, ತಂಬಿಗೆಯ ತಳದಲ್ಲಿದ್ದ ಬೊಗಸೆಯಷ್ಟು ನೀರನ್ನು ಕೆಚ್ಚಲಿಗೆ ಎರಚಿ ಹಾಲು ಕರೆಯುತ್ತಿದ್ದಾಗ ಏನೋ ಮನಸ್ಸಿನಿಂದ ಹರಿಯುತ್ತಿದೆ ಅನ್ನಿಸಿತು. ಅದು ನನಗೆ ತಿಳಿದಿದ್ದುದನ್ನೇ ನೆನಪಿಸುವಂತೆ ಬರುತ್ತಿತ್ತು. ನೊರೆ ತಂಬಿಗೆ ಕಂಠಕ್ಕೆ ಬಂದು ನಗುತಿತ್ತು. ಇನ್ನೂ ಹಿಂಡಿದರೆ ನೊರೆ ತುಳುಕಿಬಿಡುತ್ತಿತ್ತು. ಕೃಷ್ಣನಿಗೆ ಆ ಉಕ್ಕುನೊರೆಯೆಂದರೆ ಬೆಣ್ಣೆಯಷ್ಟೇ ಇಷ್ಟ. ಅವನಿಗಿಷ್ಟವಾದುದನ್ನು ಕೆಳಗೆ ಬಸಿದು ಹೋಗಲು ಬಿಡುವುದಕ್ಕೆ ಮನಸ್ಸಾಗಲಿಲ್ಲ. ಚೆಂಬಿನಲ್ಲಿದ್ದ ಹಾಲನ್ನು ಗಡಿಗೆಗೆ ಸುರಿಯುವಾಗ ಅದರ ಬಾಯಿ ಕೃಷ್ಣ ಅಗಲಿಸಿದ ಬಾಯಿಯಂತೆ ಕಂಡಿತು. ಅದವನ ಬಾಯಿಯೇ ಎಂದುಕೊಂಡು 'ಕೃಷ್ಣಾರ್ಪಣ' ಎಂದು ನಿಧಾನವಾಗಿ ಸುರಿಯುವಾಗ ನೊರೆ ಬಿದ್ದ ಶಬ್ದ ಅವನು ಗುಟುಕರಿಸುವಾಗ ಹೊರಡುತ್ತಿದ್ದ ಧ್ವನಿಯಂತಿತ್ತು. ಆ ಧ್ವನಿಯನ್ನು ಇನ್ನೊಮ್ಮೆ ಆಲಿಸಬೇಕೆನ್ನಿಸಿತು. ಅದಕ್ಕಾಗಿ ತಂಬಿಗೆಯನ್ನು ಕೆಚ್ಚಲಡಿ ಹಿಡಿದು ಹಿಂಡುವಾಗ ಮೊಲೆಯನ್ನು ಗಟ್ಟಿಯಾಗಿ ಹಿಡಿದು ಜಗ್ಗಿದೆನೇನೊ, ಹಸು ಮೆಲ್ಲಗೆ ಅಂಬಾ ಎಂದುದು ಕೃಷ್ಣಾ ಎಂದಂತೆ ಕೇಳಿಸಿತು. ಹಿಂಡುವುದನ್ನು ನಿಲ್ಲಿಸಿ, ಅದರ ಹೊಟ್ಟೆಯನ್ನು ಸವರಿದೆ. ಮುಂದಕ್ಕೆ ಹಾಲು ಕರೆಯಬೇಕೆನ್ನಿಸಲಿಲ್ಲ. ಆ ನೋವು ಕರು ಬಾಯಿ ಇಟ್ಟಾಗಲೇ ಹೋಗುವುದೆನ್ನಿಸಿ ಕರುವನ್ನು ಬಿಟ್ಟೆ.



ಹಿಂದೊಮ್ಮೆ ಹೀಗೆಯೇ ಆಯಿತು. ಹಸುಗಳನ್ನು ಮೇಯಲು ಬಿಟ್ಟು, ಅವನೊಂದಿಗೆ ಆಲದ ಮರದಡಿ ಕುಳಿತು ಅವನ ವೇಣುಗಾದಲ್ಲಿ ಮೈಮರೆತಿದ್ದೆ. ಅವನು ನುಡಿಸುವುದನ್ನು ನಿಲ್ಲಿಸಿ, ರಾಧಾ ಹಸಿವೆಯಾಗುತ್ತಿದೆ ಅಂದ. ಕೂಡಲೇ ಕುಡಿಯಲು ತೆಗೆದುಕೊಂಡು ಬಂದಿದ್ದ ಕುಡಿಯಲ್ಲಿನ ನೀರನ್ನು ಚೆಲ್ಲಿ, ಮೇಯುತ್ತಿದ್ದ ಕರಿಹಸುವಿನ ಕೆಚ್ಚಲಿಗೆ ಕೈ ಹಾಕಿ ಹಾಲು ಕರೆಯುವಾಗ ಅವನಿಗೆ ಬೇಗ ಹಾಲು ಕೊಡುವ ಆತುರದಲ್ಲಿ ಮೊಲೆಯನ್ನು ಜೋರಾಗಿ ಜಗ್ಗಿದ್ದೆ. ಅದು ನೋವಿನಿಂದ ಅಂಬಾ ಎಂದಿತು. ಕೂಡಲೇ ಇನ್ನು ಹಿಂಡಬೇಡ. ಕರೆದಿರುವಷ್ಟೇ ಸಾಕೆಂದು ಕೃಷ್ಣ ಕೂಗಿ ಹೇಳಿದ.

ತಾನಷ್ಟು ಕುಡಿದು ನನಗಷ್ಟು ಉಳಿಸಿ ಕುಡಿಯಲು ಕೊಟ್ಟ. ನಾನು ದಾವಣಿಯ ಸೆರಗಿನಿಂದ ಅವನ ತುಟಿಯಂಚಲ್ಲಿದ್ದ ನೊರೆಯನ್ನು ಒರೆಸಿದೆ. ನಕ್ಕು ನನ್ನ ತುಟಿಯತ್ತ ನೋಡಿದ. ನಾಚಿಕೊಂಡೆ. ನೀನು ನಾಚಿದಾಗ ನಿನ್ನ ಮುಖದ ಕಪ್ಪು ಕಡುಗಪ್ಪಾಗುವುದು ರಾಧ. ಆಗ ನೀನೆಷ್ಟು ಚೆಂದ ಕಾಣುತ್ತಿ ಅಂದ. ಮತ್ತೂ ನಾಚಿ, ಎಷ್ಟು ಚೆಂದ ಅಂದೆ. ನನ್ನ ಕಣ್ಣಲ್ಲಿ ನೋಡಿಕೊ ಅಂದ. ಬಾಗಿ ನೋಡಿದೆ. ಹೀಗೆ ನೋಡುವಾಗ ನನ್ನ ತುಟಿ ಅವನ ತುಟಿಯ ಮೇಲಿತ್ತು. ಅವನ ಮುಖ ನನ್ನದಾಗಿತ್ತು, ನನ್ನ ಮುಖ ಅವನದಾಗಿತ್ತು. ಎರಡು ಕಪ್ಪು ಒಂದಾದ ಕಡಲು ಎಂದೆ. ದೂರದೊಂದು ಕಡಲು ಕರೆಯುತ್ತಿದೆ. ಅಲ್ಲಿಗೆ ಎಂದೋ ಕಾಲ ಕರೆದೊಯ್ಯಲಿದೆ ಅಂದ. ಮನಸ್ಸು ಚುಳ್ಳೆಂದಿತು. ಕೃಷ್ಣಾ ಎಂದೆ. ಅವನು ಬೆನ್ನು ಸವರಿ ನಕ್ಕವನು, ಬಾ ರಾಧಿಕೆ ವಿಹರಿಸುವ ಯಮುನಾ ತಟಿಯಲಿ ಎಂದು ಕೈ ಹಿಡಿದು ನಡೆದ. ಮೇಯುತ್ತಿರುವ ದನಗಳು... ಎಂದೆ. ಮೇದು ಮನೆಗೆ ಬರಲು ಹೇಳಿದ್ದಾನೆ ರಾಧಾಕೃಷ್ಣ ಅಂದ.

ಅವನು ಗೋಕುಲದಿಂದ ನಿರ್ಗಮಿಸುವವರೆಗೆ ಮನಸ್ಸು ಎಡೆಯಿರದೆ ಅವನನ್ನೇ ತುಂಬಿಕೊಂಡಿದೆ ಎಂದು ನಂಬಿದ್ದೆ. ಆದರೆ, ಅವನತ್ತ ಹೋದದ್ದೇ ಅದರ ಅತಿ ಕಿರಿದಾದ ಜಾಗ ಮಾಡಿಕೊಂಡು ಯಾರೋ ಇರುವುದು ಮೊದಲ ಸಲ ಗಮನಿಸಿದೆ. ಅಲ್ಲಿಯೂ ಅವನನ್ನೇ ತುಂಬಿಕೊಂಡಿದ್ದರೆ